ಕೇಳುವಂತೆ ಶಬ್ದಮಾಡುತ್ತ ಅವಳನ್ನು ಕಾಲೇಜಿನ ಪಾರ್ಕಿಂಗ್‌ನಿಂದ ಹತ್ತಿಸಿಕೊಂಡು ಹೊರಟಿದ್ದ. ರಾಯರ ಮಠದ ಬಳಿ ಎಡಕ್ಕೆ ತಿರುಗುವಾಗ, 'ಇನ್ನೊಂದ್ ಸ್ವಲ್ಪ ಜಲ್ದಿ ಬೈಕ್ ಹೊಡಿಯಕ್ಕೆ ಆಗುತ್ತಾ. ಇನ್ನೈದ್ ನಿಮಿಷಕ್ಕೆ ಶಿವಮೊಗ್ಗ ಬಸ್ ಹೊರಟ್ ಬಿಡುತ್ತೆ' ಎಂದಿದ್ದಳು. ಉತ್ತೇಜಿತನಾದ ರಾಘವ ಎದುರಿಗೆ ನಿಂತಿದ್ದ ಬಸ್ಸೊಂದನ್ನು ಓವರ್‌ಟೇಕ್ ಮಾಡಲು ಬೈಕನ್ನು ಬಲಕ್ಕೆ ತಿರುಗಿಸಿದ್ದೇ ಎದುರಿನಿಂದ ಬಂದ ಮಾರುತಿ ಕಾರಿಗೆ ಓರೆಯಾಗಿ ಗುದ್ದಿ ಮಗಾಟೆ ಹೊಡೆಸಿದ್ದ. ಎಲ್ಲ ಕ್ಷಣಮಾತ್ರದಲ್ಲಿ ನಡೆದುಹೋಯಿತು. ಪ್ರಜ್ಞೆ ಬಂದಾಗ ಅದಾಗಲೇ ಬಹಳ ತಡವಾಗಿತ್ತು. ಜಾಹ್ನವಿಗೆ ತಲೆಗೆ ಪೆಟ್ಟು ಬಿದ್ದು ತೀವ್ರ ರಕ್ತಸ್ರಾವದಿಂದ ಜ್ಞಾನ ಕಳೆದುಕೊಂಡಿದ್ದಳು. ಆಸ್ಪತ್ರೆಗೆ ಹೋಗುವ ಹೊತ್ತಿಗೆ ತನ್ನ ಕೊನೆಯುಸಿರು ಎಳೆದಿದ್ದಳು.

ಇದಾದ ನಂತರ ರಾಘವ ಡೀಪ್ ಡಿಪ್ರೆಶನ್‌ಗೆ ಹೋಗಿಬಿಟ್ಟ. ಓದು, ಎಂಜಿನಿಯರಿಂಗ್, ಪ್ರಾಜೆಕ್ಟ್, ಗೆಳೆಯರು ಎಲ್ಲವೂ ಬೇಡವಾಗಿ ಹೋಯಿತು. ಕಡೆಗೆ ಆಕೆಗೆ ಸರಿಯಾಗಿ ವಿದಾಯವನ್ನು ಹೇಳಲಿಕ್ಕೆ ಸಾಧ್ಯವಾಗಲಿಲ್ಲವಲ್ಲ ಎಂದು ಬಹಳವಾಗಿ ನೊಂದುಕೊಂಡ. ಒತ್ತಾಯ ಮಾಡಿ ಊಟ ಮಾಡಿಸಬೇಕಿತ್ತು. ಅವನನ್ನು ಮರಳಿ ನಾರ್ಮಲ್ ಸ್ಥಿತಿಗೆ ತರಲು ಅವನ ತಂದೆ ತಾಯಿ ಪಟ್ಟ ಪಾಡು ಒಂದೊಂದಲ್ಲ. ಥೆರಪಿ, ಆಶ್ರಮ, ಹಿಲ್‌ಸ್ಟೇಷನ್, ಔಟಿಂಗ್ ಎಲ್ಲಾ ಆಯಿತು. ಅಷ್ಟರಲ್ಲೇ ಎರಡು ಬಾರಿ ಆತ್ಮಹತ್ಯೆ ಮಾಡಿಕೊಳ್ಳಲೂ ಪ್ರಯತ್ನಿಸಿದ್ದ. ಕೊನೆಗೆ ಮತ್ತೆ ಜೀವನಕ್ಕೆ ಮರಳಿಸಿದ್ದೇ ತನ್ನ ಫೈನಲ್ ಇಯರ್ ಪ್ರಾಜೆಕ್ಟ್. ಬಯೋಮೆಟ್ರಿಕ್ ಲಾಗ್ ಇನ್ ಮೂಲಕ ಕಂಪೆನಿಗಳಲ್ಲಿ ಕಾರ್ಮಿಕರ ಕೆಲಸದ ಅವಧಿಗಳನ್ನು ನೋಂದಾಯಿಸಿಕೊಳ್ಳುವ ಸಾಫ್ಟ್‌ವೇರ್ ಒಂದನ್ನು ತಯಾರಿಸುವ ಪ್ರಾಜೆಕ್ಟ್ ಆಗಿತ್ತು. ಅದರ ಐಡಿಯಾ ಆಕೆಯದ್ದೆ ಆಗಿತ್ತು. ಆ ಸಾಫ್ಟ್‌ವೇರ್‌ಗೆ ಆಕೆಯದ್ದೆ ಹೆಸರು ಇಟ್ಟಿದ್ದ. ಪದವೀಧರನಾದ ದಿನ ಆಕೆಯ ಸಮಾಧಿಯ ಮುಂದೆ ಕೂತು ದಿನಗಟ್ಟಲೆ ವ್ಯಥೆ ಪಟ್ಟಿದ್ದ. ಈ ಪ್ರಾಜೆಕ್ಟ್‌ನ ಸಲುವಾಗಿ ಇತರೆ ಗೆಳೆಯರಾದಿಯಾಗಿ ಪಡೆದ ಜಾಹ್ನವಿಯ ಬಯೋಮೆಟ್ರಿಕ್ ಡೇಟಾವೇ ಈಗ ರಾಘವನಿಗೆ ರೈಲಿನಲ್ಲಿ ಬೆಂಗಳೂರಿಗೆ ವಾಪಸ್ಸು ಬರುವಾಗ ನೆನಪಾಗಿ ತನ್ನ ದೇಹದೆಲ್ಲೆಡೆ ಮಿಂಚಿನ ಸಂಚಾರ ಮಾಡಿಸಿದ್ದು.

* * *

ರೈಲ್ವೆಸ್ಟೇಷನ್ನಿಂದ ಮನೆಗೆ ನಡೆದವನೇ ನೇರವಾಗಿ ತನ್ನ ಡೇಟಾಬ್ಯಾಂಕ್ ತೆಗೆದುಕೊಂಡು ಬೈಕ್ ಹತ್ತಿ, ಇನ್‌ಸ್ಟಿಟ್ಯೂಟ್‌ಗೆ ಓಟ ಕಿತ್ತ. ರೈಲಿನಲ್ಲಿ ಡಾಕ್ಟರ್ ಅನುರಾಧರ ಪುನರ್ಜನ್ಮ ಸಂಶೋಧನೆಯ ಸುಳಿವು ಮನಕ್ಕೆ ಹೊಳೆದಾಗಿನಿಂದ ಏನೊ ಒಂದು ರೀತಿಯ ತಳಮಳ ರಾಘವನನ್ನು ಆವರಿಸಿಬಿಟ್ಟಿತ್ತು. ಎಲ್ಲೋ ಮನಸ್ಸಿನಾಳದಲ್ಲಿ ಜಾಹ್ನವಿಯನ್ನು ಮತ್ತೆ ನೋಡುವ ಆಸೆ ಹುಟ್ಟಿ, ಭೂತಾಕಾರವಾಗಿ ಬೆಳೆದು ತನ್ನ ತರ್ಕವನ್ನೇ ಅಣಕಿಸುತ್ತ ಅವನನ್ನು ಸೇವಿಸಿಬಿಟ್ಟಿತ್ತು. ಡಿಪಾರ್ಟ್ಮೆಂಟ್ ಕೀಲಿ ತೆಗೆದವನೇ ಕಂಪ್ಯೂಟರ್ ಚಾಲು ಮಾಡಿ ಸಾಫ್ಟ್‌ವೇರ್‌ಗೆ ತನ್ನ ಡೇಟಾ ಬ್ಯಾಂಕಿನಿಂದ ಬಯೋಮೆಟ್ರಿಕ್ ಡೇಟಾಗಳನ್ನು ಅಂಟಿಸಿ, ಎಂಟರ್ ಒತ್ತಿದ. ಐದು ನಿಮಿಷಗಳ ಕಂಪೈಲಿಂಗ್ ನಂತರ ಬಂದ ಮಾಹಿತಿಯನ್ನು ಅವನು ನಂಬಲು ತಯಾರಿರಲಿಲ್ಲ.

* * *

ಕಂಪ್ಯೂಟರ್ ತೋರಿಸಿದ ಅಡ್ರೆಸ್ಸಿನ ಬೆನ್ನು ಹತ್ತಿ ರಾಘವ, ಬೆಳಿಗ್ಗೆಯೇ ತನ್ನ ಯಮಃ ಬೈಕೇರಿ ಹೊರಟು ಬಂದಿದ್ದ. ಅದು ಅವನನ್ನು ತರೀಕೆರೆ ಹತ್ತಿರದ ಒಂದು ಅನಾಥ ಆಶ್ರಮಕ್ಕೆ ಕರೆದುಕೊಂಡು ಬಂದಿತ್ತು. ತನ್ನ ಕಾರ್ಯವೃತ್ತಿ ಹಾಗೂ ಭೇಟಿಯ ಉದ್ದೇಶವನ್ನು ಆಶ್ರಮದ ಸಂಚಾಲಕರಿಗೆ ತಿಳಿಸಿ ಈ ಹುಡುಗಿಯನ್ನು ಪ್ರತ್ಯೇಕವಾಗಿ ಕಾಣಬೇಕು ಎಂದು ತಿಳಿಸಿದ. ಅನಾಥ ಹುಡುಗರೆಲ್ಲರೂ ಪ್ಲೆ ಗ್ರೌಂಡಿನಲ್ಲಿ ಆಟವಾಡುತ್ತಿದ್ದರು. ಪ್ರಾಂಶುಪಾಲರು ಪ್ಯೂನ್ ಒಬ್ಬನನ್ನು ಕರೆದು ನಂದಿನಿಯನ್ನು ಕರೆದುಕೊಂಡು ಬರುವಂತೆ ಸೂಚಿಸಿದರು. ಅವನು ಪ್ರಾಂಶುಪಾಲರ ಕೊಠಡಿಯಲ್ಲೇ ಕೂತು ಅವರೊಂದಿಗೆ ಹರಟತೊಡಗಿದ. ಐದು ನಿಮಿಷಗಳ ನಂತರ ನಂದಿನಿ ಬಂದಳು. 'ಒಳಕ್ಕೆ ಬರಬಹುದೇ ಸರ್' ಎಂದು ಅಪ್ಪಣೆ ಕೇಳಿದಳು. ರಾಘವ ಆಕೆಯ ಕಡೆ ತಿರುಗಿದವನೇ ಅವಕ್ಕಾಗಿ ಚೇರಿನಿಂದ ಎದ್ದು ನಿಂತ. ಅವೇ ಕಣ್ಣುಗಳು. ಜಾಹ್ನವಿ ಸಣ್ಣ